ಅ) ಪ್ರಸಕ್ತ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ನೆರೆ ಪ್ರವಾಹದಿಂದಾಗಿ ಆಗಿರುವ ಆಸ್ತಿ ಪಾಸ್ತಿಗಳ ನಷ್ಟ ಮತ್ತು ಜೀವಹಾನಿಯ ಕ್ಷೇತ್ರವಾರು ವಿವರ ನೀಡುವುದು;

ಆ) ಸಂಕಷ್ಟಕ್ಕೀಡಾದವರಿಗೆ ಸರ್ಕಾರದಿಂದ ದೊರಕಿರುವ ಪರಿಹಾರದ ಮಾಹಿತಿ ಕ್ಷೇತ್ರವಾರು ವಿವರ ನೀಡುವುದು;

ಇ) ಉಡುಪಿ ಜಿಲ್ಲೆ ಹಾಗೂ ಬ್ರಹ್ಮಾವರ ಕ್ಷೇತ್ರದಲ್ಲಿ ಪ್ರಕೃತಿ ವಿಕೋಪವನ್ನು ನಿಭಾಯಿಸಲು ಸರ್ಕಾರವು ಹಾಕಿಕೊಂಡಿರುವ ಕಾರ್ಯಸೂಚಿಗಳೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಕ್ಷೇತ್ರ	ಜೀವಹಾನಿ	ಆಸ್ತಿಪಾಸ್ತಿ	ಅಂದಾಜುನಷ್ಟ
1.	ಉಡುಪಿ	1	2.10
2.	ಕಾಪು	–	2.30
3.	ಬ್ರಹ್ಮಾವರ	1	3.40
4.	ಕುಂದಾಪುರ	–	5.90
5.	ಬೈಂದೂರು	4	0.45
6.	ಕಾರ್ಕಳ	2	3.25
	ಒಟ್ಟು	**8**	**17.40**

ಆ)

	ಪರಿಹಾರ (ರೂ. ಲಕ್ಷಗಳಲ್ಲಿ)	ಕ್ಷೇತ್ರ
1.	ಉಡುಪಿ	0.65
2.	ಕಾಪು	0.31
3.	ಬ್ರಹ್ಮಾವರ	0.70
4.	ಕುಂದಾಪುರ	0.22
5.	ಬೈಂದೂರು	0.59
6.	ಕಾರ್ಕಳ	0.81
	ಒಟ್ಟು	**3.28**

ಇ) ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಎಲ್ಲಾ ಇಲಾಖೆಯ ಸಹಕಾರದೊಂದಿಗೆ ಮುಂಜಾಗ್ರತೆ ಸಭೆ ಜರುಗಿಸಲಾಗಿದೆ ಹಾಗೂ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ದಿನದ 24 ಗಂಟೆ ಕಾರ್ಯ ನಿರ್ವಹಿಸುವ ನಿಯಂತ್ರಣ ಕೊಠಡಿಗಳನ್ನು ತೆರೆಯಲಾಗಿದೆ. ಎಲ್ಲಾ ಸಿಬ್ಬಂದಿಗಳಿಗೆ ತುರ್ತು ಸಂದೇಶಗಳನ್ನು ನೀಡುವರೇ ವೈರ್‌ಲೆಸ್ ಸೆಟ್‌ಗಳನ್ನು ಹಾಗೂ ನೆರೆಯಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರ ನೀಡಲಾಗುತ್ತಿದೆ.

ನೂತನ ತಾಲ್ಲೂಕುಗಳ ರಚನೆ

3312 (3306) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊಸದಾಗಿ ರಚಿಸಲು ಉದ್ದೇಶಿಸಿದ ಎಷ್ಟು ತಾಲ್ಲೂಕುಗಳಿಗೆ ವಿಶೇಷ ತಹಸೀಲ್ದಾರರನ್ನು ನೇಮಕ ಮಾಡಲು ತೀರ್ಮಾನಿಸಲಾಗಿದೆ; ವಿವರ ನೀಡುವುದು;

ಆ) ರಚಿಸಲು ಉದ್ದೇಶಿಸಿರುವ ತಾಲ್ಲೂಕುಗಳು ಯಾವುವು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಯಾವುದೇ ಹೊಸ ತಾಲ್ಲೂಕು ರಚಿಸುವ ಉದ್ದೇಶ ಇರುವುದಿಲ್ಲ.

ಆ) ಆದರೆ, ತಾಲ್ಲೂಕು ಪುನರ್‌ವಿಂಗಡಣಾ ಸಮಿತಿಗಳು ಶಿಫಾರಸ್ಸು ಮಾಡಿರುವಂತಹುಗಳಲ್ಲಿ ಎಲ್ಲೆಲ್ಲಿ ಕೆಲಸದ ಒತ್ತಡ ಇದೆಯೋ ಅಲ್ಲಿ ವಿಶೇಷ ತಹಸೀಲ್ದಾರ್‌ಗಳನ್ನು ಈ ಕೆಳಕಂಡಂತೆ ನೇಮಕ ಮಾಡಲಾಗಿದೆ.

	ಜಿಲ್ಲೆ		ತಾಲ್ಲೂಕು
1)	ಚಾಮರಾಜನಗರ	1)	ಹನೂರು
2)	ದಕ್ಷಿಣ ಕನ್ನಡ ಜಿಲ್ಲೆ	1)	ಮೂಡಬಿದ್ರೆ
		2)	ಕಡಬ
3)	ಉಡುಪಿ	1)	ಬೈಂದೂರು
4)	ಬಿಜಾಪುರ	1)	ತಾಳಿಕೋಟೆ
		2)	ನಿಡಗಂದಿ
		3)	ಓಬಲೇಶ್ವರ
		4)	ಚಡಚಣ
5)	ಬಾಗಲಕೋಟೆ	1)	ಗುಳೇದಗುಡ್ಡ
		2)	ಇಳಕಲ್
6)	ಬಳ್ಳಾರಿ	1)	ಕುರುಗೋಡು
7)	ಗದಗ್	1)	ಲಕ್ಷ್ಮೇಶ್ವರ
		2)	ಗಜೇಂದ್ರಗಡ
8)	ಬೀದರ್	1)	ಬೆಟಗುಪ್ಪ
9)	ಬೆಳಗಾಂ	1)	ಕಿತ್ತೂರು
10)	ರಾಯಚೂರು	1)	ಮಸ್ಕಿ

ಆ) ಉದ್ಭವಿಸುವುದಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿನ ರಾಜ್ಯ ಹೆದ್ದಾರಿ ನಿರ್ವಹಣೆ

3313 (3744) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕಿಲೋಮೀಟರ್ ರಾಜ್ಯ ಹೆದ್ದಾರಿ ಇರುವುದ: (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ರಾಜ್ಯ ಹೆದ್ದಾರಿಯ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿಕೊಡಲಾಗುತ್ತಿರುವ ಸಂಗತಿ ನಿಜವೇ:

ಇ) ಹಾಗಿದ್ದಲ್ಲಿ, ಯಾವ ಯಾವ ಷರತ್ತಿನ ಮೇಲೆ ಈ ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿಕೊಡಲಾಗುವುದು: